# ಸ್ವಾತಂತ್ರ್ಯ ಹೋರಾಟಕ್ಕೆ ಹೂವಿನಹಡಗಲಿ ತಾಲ್ಲೂಕಿನ ಕೊಡುಗೆ

**ಶರಣಪ್ಪ ಬಸಪ್ಪ ಜಗ್ಗಲ[1] & ಶಿವಯೋಗಿ ಕೋರಿಶೆಟ್ಟರ[2]**

[1]ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕೆ.ಎಲ್.ಇ ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಪದವಿ ಕಾಲೇಜು, ಹಾವೇರಿ.

[2]ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕೆ.ಎಲ್.ಇ ಸಂಸ್ಥೆಯ ಗುದ್ಲೆಪ್ಪ ಹಳ್ಳಿಕೇರಿ ಪದವಿ ಕಾಲೇಜು, ಹಾವೇರಿ.

DOI: https://doi.org/10.5281/zenodo.17411795

## ABSTRACT:

ಈ ಲೇಖನವು ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕೊಡುಗೆಯನ್ನು ವಿವರಿಸುತ್ತದೆ. ಹೂವಿನಹಡಗಲಿಯು ಐತಿಹಾಸಿಕವಾಗಿ ಹಲವು ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು. ಬ್ರಿಟಿಷರ ದಬ್ಬಾಳಿಕೆ ವಿರುದ್ಧ ಭಾರತದಲ್ಲಿ ಹೊತ್ತಿದ ಕಿಡಿಯು ಈ ತಾಲ್ಲೂಕಿನ ಜನರಲ್ಲಿ ರಾಷ್ಟ್ರಾಭಿಮಾನ ಮೂಡಿಸಿತು. ದೊಂಡಿಯಾವಾಘನ ದಂಗೆ, ನಗರ ಬಂಡಾಯ ಮತ್ತು 1858ರ ದಂಗೆಗಳು ಇಲ್ಲಿನ ಹೋರಾಟಕ್ಕೆ ಸ್ಫೂರ್ತಿಯಾಗಿದ್ದವು. ಕಾಯ್ದೆಭಂಗ ಚಳುವಳಿಯ ಸಂದರ್ಭದಲ್ಲಿ ಮಾಗಳ ಗ್ರಾಮದಲ್ಲಿ ಈಚಲ ಮರ ಕಡಿದು, ಹೆಂಡದ ಚೀಲ ನಾಶಪಡಿಸಿ ಪ್ರತಿಭಟಿಸಲಾಯಿತು. ಬಿ. ಲಂಕೆಪ್ಪ ನೆಗಳೂರು, ಧರ್ಮಣ್ಣ ಮುಂತಾದವರು ಸಕ್ರಿಯವಾಗಿ ಭಾಗವಹಿಸಿದ್ದರು. ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲೂ ಹಡಗಲಿಯು ಭಾಗವಹಿಸಿತ್ತು. ಹರಿಜನ ಕೇರಿಯಲ್ಲಿ ಅಂಗಡಿ ತೆರೆಯುವುದು, ಪ್ರಾಣಿಬಲಿ ನಿಷೇಧದಂತಹ ಸಾಮಾಜಿಕ ಸುಧಾರಣಾ ಚಟುವಟಿಕೆಗಳ ಮೂಲಕವೂ ರಾಷ್ಟ್ರ ಜಾಗೃತಿ ಮೂಡಿಸಲಾಯಿತು. ಧಾರವಾಡ ಜಿಲ್ಲೆಯ ಹೋರಾಟಗಾರರ ಪ್ರಭಾವವೂ ಇಲ್ಲಿನ ಚಟುವಟಿಕೆಗಳ ಮೇಲೆ ಇತ್ತು. ಈ ಎಲ್ಲಾ ನಿಸ್ವಾರ್ಥ ಹೋರಾಟಗಳು ತಾಲ್ಲೂಕಿನ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರಮುಖ ಕೊಡುಗೆಗಳಾಗಿವೆ.

## KEYWORDS:

ಹೂವಿನಹಡಗಲಿ, ಸ್ವಾತಂತ್ರ್ಯ ಹೋರಾಟ, ಕಾಯ್ದೆಭಂಗ ಚಳುವಳಿ, ಭಾರತ ಬಿಟ್ಟು ತೊಲಗಿ ಚಳುವಳಿ, ಬನ್ನಿಮಟ್ಟಿ ಲಂಕೆಪ್ಪ.

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ಅವಲೋಕಿಸಿದಾಗ ಹೂವಿನಹಡಗಲಿ ತಾಲ್ಲೂಕಿಗೆ ತನ್ನದೇ ಆದ ಇತಿಹಾಸ ವೈಭವವಿದೆ. ಹಳೆಶಿಲಾಯುಗ ಕಾಲದಿಂದಲೂ ಭವ್ಯ ಪರಂಪರೆಯನ್ನು ಹೊಂದಿರುವ ಈ ತಾಲೂಕಿನಲ್ಲಿ ಶಾತವಾಹನರು, ಪಲ್ಲವರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಪಾಳೆಯಗಾರರು ನಂತರ ಹೈದರ್ಟಿಪ್ಪು ಸುಲ್ತಾನರು ಹಾಗೂ ಬ್ರಿಟಿಷರು ಆಳ್ವಿಕೆ ಮಾಡಿದ್ದಾರೆ. ವಿವಿಧ ಅರಸು ಮನೆತನದವರು ತಮ್ಮ ಆಳ್ವಿಕೆಯ ಸಂದರ್ಭದಲ್ಲಿ ಹಲವು ಬಗೆಯ ದೇವಾಲಯಗಳು, ಶಾಸನಗಳು, ಮೂರ್ತಿಶಿಲ್ಪಗಳು, ಕೋಟೆಕೊತ್ತಲುಗಳು, ಕೆರೆಬಾವಿಗಳು ಹೀಗೆ ಅನೇಕ ಸ್ಮಾರಕಗಳನ್ನು ನಿರ್ಮಿಸಿರುವರು. ಇವು ಅಂದಿನ ಕಾಲದ ಐತಿಹಾಸಿಕ ಅಸ್ಮಿತೆಗಳಾಗಿವೆ.

17ನೇ ಶತಮಾನದಲ್ಲಿ ವ್ಯಾಪಾರದ ಉದ್ದೇಶದಿಂದ ಭಾರತವನ್ನು ಪ್ರವೇಶಿಸಿದ ಆಂಗ್ಲರು ಕ್ರಮೇಣ ದೇಶೀಯ ಅರಸರನ್ನು ರಾಜಕೀಯವಾಗಿ ಮೂಲೆಗೆ ತಳ್ಳಿ ತಾವು ಪ್ರಬಲವಾಗುವುದರೊಂದಿಗೆ ಭಾರತವನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಂಡು

ಭಾರತೀಯರನ್ನು ತಮ್ಮ ಗುಲಾಮರಂತೆ ಕಾಣುತ್ತಾ ದಬ್ಬಾಳಿಕೆಯ ಆಡಳಿತವನ್ನು ಆರಂಭಿಸಿದರು. ಇದರಿಂದ ಭಾರತೀಯರಲ್ಲಿ ಬ್ರಿಟಿಷ್ ವಿರೋಧಿ ಚಳುವಳಿಯ ಕಿಡಿ ಹೊತ್ತಿಕೊಂಡಿತು. ಇದರ ಪರಿಣಾಮವಾಗಿ ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಜನರಲ್ಲಿಯೂ ರಾಷ್ಟ್ರಾಭಿಮಾನ ಸ್ವಾಭಾವಿಕವಾಗಿಯೇ ಜನ್ಮತಾಳಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರವೇಶಿಸುವಂತೆ ಮಾಡಿತು.

ಈ ಭಾಗದ ಸ್ವಾತಂತ್ರ್ಯ ಹೋರಾಟಕ್ಕೆ ದೊಂಡಿಯಾವಾಘನ ದಂಗೆ, ನಗರ ಬಂಡಾಯ, ಪಾಳೆಗಾರರ ಬಂಡಾಯ, 1858 ಮುಂಡರಗಿ ಭೀಮರಾಯನ ದಂಗೆ, 1885 ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ, ತಿಲಕರ ಬಳ್ಳಾರಿ ಭೇಟಿ, ಅಸಹಕಾರ ಚಳವಳಿ, ಗಾಂಧೀಜಿಯವರ ಬಳ್ಳಾರಿ ಪ್ರವಾಸ, ಕಾಯ್ದೆಭಂಗ ಚಳುವಳಿ, ಭಾರತ ಬಿಟ್ಟು ತೊಲಗಿ ಚಳುವಳಿ ಹಾಗೂ ನಾಡಿನಾದ್ಯಂತ ಜರುಗಿದ ಘಟನಾವಳಿಗಳು ಹಡಗಲಿ ತಾಲ್ಲೂಕಿನ ಜನತೆಯಲ್ಲಿ ಸ್ವಾತಂತ್ರ್ಯದ ಸವಿಗನಸುಗಳನ್ನು ಬಿತ್ತುವಲ್ಲಿ ಪ್ರಮುಖ ಪಾತ್ರವಹಿಸಿದವು.

**ಹೊಳಲು:** ಹಡಗಲಿ ತಾಲ್ಲೂಕಿನ ಹೊಳಲು ಗ್ರಾಮದಲ್ಲಿ ಮೊದಲು ಬ್ರಿಟಿಷರನ್ನು ವಿರೋಧಿಸಿ ಪ್ರತಿಭಟಿಸಿದರು. ದೊಂಡಿಯಾವಾಘನ ದಂಗೆ, ನಗರ ಬಂಡಾಯ ಇವರಿಗೆ ಸ್ಫೂರ್ತಿಯಾಯಿತು. ತೆರಿಗೆ ವಿರೋಧಿಸಿ ಖಜಾನೆ ಧ್ವಂಸ ಮಾಡಿ ಪ್ರತಿಭಟಿಸಿದರು. ಕರ್ನಲ್‌ನ ಸೈನ್ಯ ಹೊಳಲಿಗೆ ಬಂದು ಅಲ್ಲಿ ದಂಗೆಯನ್ನು ಶಮನಮಾಡಿ, ದೊಂಡಿಯಾವಾಘನನ್ನು ಸೋಲಿಸಿದರು.

**ಮೈಲಾರ:** ಮೈಲಾರ ಜಾತ್ರೆಯಲ್ಲಿ ಗೆದ್ದಲು ಹುಳುಗಳು ಎದ್ದಾವು ಎಂದು ಕಾರಣಿಕ ನುಡಿದರು. ಬ್ರಿಟಿಷರ ವಿರುದ್ಧ ಸ್ಥಳೀಯರು ದಂಗೆ ನಡೆಸುತ್ತಾರೆ. ಮುಂಡರಗಿ ಭೀಮರಾಯ, ನರಗುಂದ ಬಾಬಾಸಾಹೇಬ, ಹಡಗಲಿ ಬೇಡರು ಮುಧೋಳ ತಾಲ್ಲೂಕು ಹಲಗಲಿಯಂತೆ ಚಿತ್ರಣ ಇಲ್ಲಿ ಕಂಡುಬರುತ್ತದೆ.

**ಕಾಯ್ದೆಭಂಗ ಚಳುವಳಿ:**

ಕ್ರಿ.ಶ. 1930ರಲ್ಲಿ ಆರಂಭವಾದ ಈ ಚಳವಳಿಯ ಪ್ರಭಾವದಿಂದ ವಿಜಯನಗರ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನಲ್ಲಿಯೂ ದೇಶಪ್ರೇಮ ವ್ಯವಸ್ಥಿತವಾಗಿ ರೂಪಗೊಂಡಿತು. ಇದರ ಪ್ರತಿಫಲವೆಂಬಂತೆ ಈ ತಾಲ್ಲೂಕಿನಲ್ಲಿಯೂ ಸಹ ಕಾಯ್ದೆಭಂಗ ಚಳವಳಿ ಬಿರುಸಾಗಿ ಕಂಡುಬರುತ್ತದೆ. ತಾಲ್ಲೂಕಿನ ಮಾಗಳ ಗ್ರಾಮದಲ್ಲಿ ಈಚಲ ಮರಗಳನ್ನು ಕಡಿಯುವ ಮೂಲಕ ಪ್ರತಿಭಟನೆ ನಡೆಸಲಾಯಿತು. ಅಲ್ಲದೆ ಹೆಂಡವನ್ನು ಕತ್ತೆಯ ಮೇಲೆ ಸಾಗಿಸುವ ಚಿಪ್ಪಿಗಳನ್ನು ಅಂದರೆ ಹೆಂಡದ ಚೀಲಗಳನ್ನು ನಾಶಮಾಡುವ ಮೂಲಕ ಕಾಯ್ದೆ ಮುರಿದು ಶಿಕ್ಷೆಗೊಳಗಾಗಿರುವುದು ಈ ಪ್ರದೇಶದ ಜನರಲ್ಲಿದ್ದ ರಾಷ್ಟ್ರಭಕ್ತಿಗೆ ಹಿಡಿದ ಕೈಗನ್ನಡಿಯಾಗಿದೆ. ಇಂಥ ಹೋರಾಟಗಳಲ್ಲಿ ಧುಮುಕಿದವರಲ್ಲಿ ಶ್ರೀ ಬಿ. ಲಂಕೆಪ್ಪ ನೆಗಳೂರು, ಧರ್ಮಣ್ಣ ಮುಂತಾದವರು ಪ್ರಮುಖರು. ಅಲ್ಲದೆ ಏಕೋಂಬ್ರಪ್ಪ ಮತ್ತು ಪತ್ರಕರ್ತರಾಗಿದ್ದ ರಾಮಣ್ಣನವರು ಸಹ ಈ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದರು. ಹೀಗೆ ಹಡಗಲಿ ತಾಲ್ಲೂಕಿನ ವಿವಿಧ ಭಾಗಗಳಲ್ಲಿ ನಡೆದ ಅನೇಕ ಚಳುವಳಿಗಳಲ್ಲಿ ಈ ಪ್ರದೇಶದ ಹೋರಾಟಗಾರರು ಭಾಗವಹಿಸಿ ಶಿಕ್ಷೆಗೊಳಗಾದವರ ಸಂಖ್ಯೆ ಅಪಾರವಾಗಿತ್ತು.

**ಭಾರತ ಬಿಟ್ಟು ತೊಲಗಿ ಚಳವಳಿ:**

ಭಾರತದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಕ್ಕೆ ವಿಶ್ವದಲ್ಲಿ ಅನನ್ಯವಾದ ಸ್ಥಾನ ಸಿಕ್ಕಿದೆ. ಬ್ರಿಟಿಷ್ ಪ್ರಭುತ್ವ ಕಟ್ಟಿದ್ದ ಸೂರ್ಯ ಮುಳುಗದ

ಸಾಮ್ರಾಜ್ಯವನ್ನು ಅಹಿಂಸೆ, ಸತ್ಯಾಗ್ರಹಗಳ ಮೂಲಕ ಭಾರತವು ಮಣಿಸಿದ್ದು ನಿಜಕ್ಕೂ ಅದ್ವಿತೀಯವಾದದ್ದು. ಕ್ರಿ.ಶ. 1942ರ ಮುಂಬಯಿನ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ 'ಬ್ರಿಟಿಷರೆ ಭಾರತ ಬಿಟ್ಟು ತೊಲಗಿ' ಎಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ಸರ್ಕಾರವು ಮರುದಿನ ಕಾಂಗ್ರೆಸ್‌ನ ಎಲ್ಲಾ ನಾಯಕರನ್ನು ಬಂಧಿಸಿತು. ಇದರ ವಿರುದ್ಧ ಸಿಡಿದೆದ್ದ ಜನರು ಇಡೀ ದೇಶದ ತುಂಬೆಲ್ಲಾ ಚಳವಳಿಯನ್ನು ತೀವ್ರಗೊಳಿಸಿದರು. ಇದರ ವ್ಯಾಪಕತೆಯ ಕುರಿತು ಮದರಾಸು ಪ್ರಾಂತ ಸರ್ಕಾರದ ರಹಸ್ಯ ದಾಖಲೆಗಳಲ್ಲಿ ದಾಖಲಾಗಿವೆ. ಈ ವರದಿಗಳಿಂದ ಚಳವಳಿಯ ಸಮಗ್ರ ಸ್ವರೂಪವನ್ನು ಕಂಡುಕೊಳ್ಳಬಹುದಾಗಿದೆ. ಈ ವರದಿಗಳ ಹಿನ್ನೆಲೆಯಲ್ಲಿ ಹಡಗಲಿ ತಾಲ್ಲೂಕಿನಲ್ಲಿ ನಡೆದ 3 ಘಟನೆಗಳ ವಿವರಗಳನ್ನು ತಿಳಿದುಕೊಳ್ಳಬಹುದು. ಇಲ್ಲಿರುವ ವಿವರಗಳಲ್ಲಿ ಚಳುವಳಿಗಾರರ ಹೆಸರುಗಳಿಲ್ಲ; ಆದರೆ ಘಟನೆಗಳ ಉಲ್ಲೇಖಗಳಿವೆ. 1942, ಸೆಪ್ಟೆಂಬರ್ 5ರಂದು ಪಾನನಿಷೇಧ ಚಳವಳಿಯಲ್ಲಿ 5 ಜನರನ್ನು ಬಂಧಿಸಲಾಯಿತು. ನಂತರ ಸೆಪ್ಟೆಂಬರ್ 19ರಂದು ಹಡಗಲಿ ನಗರದ ಎರಡು ಸ್ಥಳಗಳಲ್ಲಿ ನಿಷೇಧಿಸಿದ ಭಿತ್ತಿ ಚಿತ್ರಗಳನ್ನು ಅಂಟಿಸಲಾಗಿತ್ತು. ರೇಕೆಟ್ಲಾ ಮೊಕದ್ದಮೆ (ರೇಕೆಟ್ಲಾ ಪೋಲಿಸ್ ಠಾಣೆಯ ಗುಂಡುಗಳಿದ್ದ ಕಬ್ಬಿಣ ಪೆಟ್ಟಿಗೆಯನ್ನು ಕದ್ದುಕೊಂಡು ಹೋಗಿ ಬಾವಿಯಲ್ಲಿ ಹಾಕಲಾಯಿತು)ಗೆ ಸಂಬಂಧಿಸಿದಂತೆ ಮೂವರಿಗೆ 2 ವರ್ಷ ಕಠಿಣ ಶಿಕ್ಷೆ ಹಾಗೂ ತಲಾ 100 ರೂ. ದಂಡ ವಿಧಿಸಲಾಯಿತು.

**ಹರಿಜನ ಕೇರಿಯಲ್ಲಿ ಅಂಗಡಿ:**

ಹಡಗಲಿ ತಾಲ್ಲೂಕಿನ ಮಾಗಳ ಗ್ರಾಮದ ಬನ್ನಿಮಟ್ಟಿ ಲಂಕೆಪ್ಪನವರು ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆ ವಿಚಾರಗಳಿಂದ ಪ್ರೇರಿತರಾಗಿ ಹರಿಜನ ಕೇರಿಯಲ್ಲಿ ಅಂಗಡಿಯೊಂದನ್ನು ತೆರೆದರು. ಹರಿಜನ ಕೇರಿಗೆ ಎಲ್ಲರೂ ಪ್ರವೇಶಿಸುವಂತೆ ಜನರಲ್ಲಿ ಜಾಗೃತಿ ಉಂಟು ಮಾಡುವಲ್ಲಿ ಲಂಕೆಪ್ಪನವರು ಬಹುವಾಗಿ ಕೆಲಸ ಮಾಡಿದರು. ತಮ್ಮ ಅಂಗಡಿಗಳಲ್ಲಿ ಲಂಕೆಪ್ಪನವರು ಭಾರತ ಮಾತೆಯ ಛಾಯಾಚಿತ್ರಗಳನ್ನು ಪೂಜಿಸುತ್ತಿದ್ದರು. ಅಂಗಡಿಯ ಮೇಲೆ ರಾಷ್ಟ್ರಧ್ವಜವನ್ನು ಹಾರಿಸುತ್ತಿದ್ದರು. ಬನ್ನಿಮಟ್ಟಿ, ಹೊಳಲು, ಕೊಂಬಳಿ, ಹಾವನೂರು, ಹೆಬ್ಬಾಳ, ಗಳಗನಾಥ ಮುಂತಾದ ಹಳ್ಳಿಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಅಂಗಡಿಹೋಟೆಲ್‌ಗಳಲ್ಲಿ ಹರಿಜನರಿಗೆ ಪ್ರವೇಶ ನೀಡುವಂತೆ ಜನರಿಗೆ ತಿಳಿಹೇಳುವ ಕೆಲಸವನ್ನು ಮಾಡಿದರು.

**ಪ್ರಾಣಿಬಲಿ ನಿಷೇಧ:**

ಹಡಗಲಿ ತಾಲ್ಲೂಕಿನ ಹಾವನೂರು ಮತ್ತು ಕೊಂಬಳಿಗಳಲ್ಲಿ ನಡೆಯುತ್ತಿದ್ದ ಜಾತ್ರೆಗಳಲ್ಲಿ 'ಕೋಣನ ಬಲಿ' ನಡೆಯುತ್ತಿತ್ತು. ಬನ್ನಿಮಟ್ಟಿ ಲಂಕೆಪ್ಪ, ನೆಗಳೂರು ಧರ್ಮಣ್ಣ, ನೆಗಳೂರು ಇಮಾಮ್ ಸಾಹೇಬ್, ಶಿವಪುರದ ಏಕಾಂಬರಪ್ಪ ಮುಂತಾದವರು ಸೇರಿಕೊಂಡು ಜಾತ್ರೆಗಳಲ್ಲಿ ನಡೆಯುತ್ತಿದ್ದ ಕೋಣನ ಬಲಿಯನ್ನು ನಿಷೇಧಿಸುವ ಚಳುವಳಿ ನಡೆಸಿದರು. ಇವರ ಹೋರಾಟದ ಫಲವಾಗಿ ಕೊಂಬಳಿಯಲ್ಲಿ 'ಪ್ರಾಣಿಬಲಿ'ಯು ಸ್ಥಗಿತಗೊಂಡಿತು. ಇಂತಹ ಚಳುವಳಿಗಳ ಮೂಲಕ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಜನಜಾಗೃತಿಯನ್ನು ಮೂಡಿಸುವಲ್ಲಿ ಈ ತಂಡವು ಯಶಸ್ವಿಯಾಯಿತು.

**ವಿಜಯನಗರ ಜಿಲ್ಲೆಯ ಗಡಿಯ ಹೊರಗಿನ ಸ್ವಾತಂತ್ರ್ಯ ಹೋರಾಟ:**

ವಿಜಯನಗರ ಜಿಲ್ಲೆಯ ಗಡಿಯ ಹೊರಗಿನವರು ವಿಜಯನಗರ ಜಿಲ್ಲೆಗೆ ಬಂದು ಸ್ವಾತಂತ್ರ್ಯ ಹೋರಾಟ ನಡೆಸಿದ ಪ್ರಸಂಗಗಳು ಇವೆ. ಅಂತವರಲ್ಲಿ ಎಸ್.ವಿ. ದೇಸಾಯಿಯವರು ಪ್ರಮುಖರು. ಇವರು ತಮ್ಮ ಸಲಹೆಮಾರ್ಗದರ್ಶನಗಳಿಂದ ವಿಜಯನಗರ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಆಯಾಮ ನೀಡಿದರು. ಇವರು

ಮೂಲತಃ ಗದಗ ಪ್ರದೇಶದ ತಿಮ್ಮಾಪುರಅಡವಿ ಸೋಮಲಾಪುರ ದೇಸಾಯಿ ಮನೆತನಕ್ಕೆ ಸೇರಿದವರು. 1858ರ ನರಗುಂದದ ಬಾಬಾ ಸಾಹೇಬನ ಬಂಡಾಯದಲ್ಲಿ ಸೇರಿದ್ದರು. ಇದರಿಂದ ಇವರ ದೇಶಗತಿಯನ್ನು ಬ್ರಿಟಿಷರು ಕಸಿದುಕೊಂಡಿದ್ದರು. ದೇಸಗತಿ ಕಳೆದುಕೊಂಡ ಮೇಲೆ ಇವರ ಮನೆತನವು ಹೂವಿನ ಹಡಗಲಿಯ ಚಿಮ್ಮನಹಳ್ಳಿಗೆ ಬಂದು ನೆಲೆಸಿತು. ಇವರು 1920 ರಿಂದ 1936ರವರೆಗೆ ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ ತಾಲ್ಲೂಕುಗಳಲ್ಲಿ ಕಾಂಗ್ರೆಸ್ ಸದಸ್ಯರ ನೋಂದಾವಣಿ ಹಾಗೂ ಖಾದಿ ಪ್ರಚಾರ ಮಾಡಿದರು. 1941ರಲ್ಲಿ ತಂಬರಹಳ್ಳಿಯಲ್ಲಿ ವೈಯಕ್ತಿಕ ಚಳುವಳಿ ಮಾಡಿದರು. ನಂತರ ಜೈಲು ಬಂಧನಕ್ಕೆ ಒಳಗಾದರು.

**ಮಾಗಳದಲ್ಲಿ ಧಾರವಾಡ ಜಿಲ್ಲೆಯ ಹೋರಾಟದ ಪ್ರಭಾವ:**

ವಿಜಯನಗರ ಜಿಲ್ಲೆಯ ಹಡಗಲಿ ತಾಲ್ಲೂಕಿನ ಗಡಿಭಾಗದ ಕೊಂಬಳಿ, ಮಾಗಳ, ಹೊಳಲು, ಮೈಲಾರ ಮುಂತಾದ ಊರುಗಳಲ್ಲಿನ ಸ್ವಾತಂತ್ರ್ಯ ಚಳುವಳಿ ಚಟುವಟಿಕೆಗಳು ಧಾರವಾಡ ಜಿಲ್ಲೆಯಲ್ಲಿ ನಡೆಯುತ್ತಿದ್ದ ಚಳುವಳಿಯ ಜೊತೆ ಹೆಚ್ಚಿನ ಸಂಬಂಧ ಹೊಂದಿದ್ದವು. ಧಾರವಾಡ ಜಿಲ್ಲೆಯ ಮುಂಡರಗಿ, ಕೋಗನೂರು, ನೆಗಳೂರು, ಹೊಸರಿತ್ತಿ ಮುಂತಾದ ಊರುಗಳಲ್ಲಿ ನಡೆಯುತ್ತಿದ್ದ ಮೈಲಾರ ಮಹದೇವಪ್ಪನವರ ತಂಡದ ಚಟುವಟಿಕೆಗಳು ಹಡಗಲಿ ತಾಲ್ಲೂಕಿನ ಗಡಿಭಾಗದ ಗ್ರಾಮಗಳಲ್ಲಿ ಜನಪ್ರಿಯವಾಗಿದ್ದವು. ಹಡಗಲಿ ತಾಲ್ಲೂಕಿನಲ್ಲಿ ಉಳಿದೆಲ್ಲಾ ಗ್ರಾಮಗಳಿಗಿಂತ ಮಾಗಳ ಗ್ರಾಮವು ಸ್ವಾತಂತ್ರ್ಯ ಚಳುವಳಿಯಲ್ಲಿ ಮುಂಚೂಣಿಯಲ್ಲಿತ್ತು. ಖಾದಿ ಕೇಂದ್ರ ಸ್ಥಾಪನೆ, ಮದ್ಯಪಾನ ನಿಷೇಧ, ಪ್ರಾಣಿಬಲಿ ನಿಷೇಧ ಮುಂತಾದ ಚಟುವಟಿಕೆಗಳು ಮಾಗಳ, ಹೊಳಲು, ಕೊಂಬಳಿ ಮುಂತಾದ ಊರುಗಳಲ್ಲಿ ವ್ಯಾಪಕವಾಗಿ ಜಾರಿಯಲ್ಲಿದ್ದವು.

ಒಟ್ಟಾರೆಯಾಗಿ ಹಡಗಲಿ ತಾಲ್ಲೂಕಿನಲ್ಲಿ ನಡೆದ ಚಳವಳಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಪ್ರಮುಖವಾದ ಕೊಡುಗೆಗಳನ್ನ ನೀಡಿವೆ. ಇಲ್ಲಿನ ಸ್ವಾತಂತ್ರ್ಯ ಹೋರಾಟಗಾರರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ನಿಸ್ವಾರ್ಥ ಮನೋಭಾವದಿಂದ ದೇಶ ಪ್ರೇಮದಿಂದ ಪ್ರೇರಿತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರುವರು. ಜಾತಿಮತಧರ್ಮಗಳ ಭೇದವನ್ನು ಮರೆತು ಒಂದುಗೂಡಿ ಹೋರಾಡಿದವರು. ಪ್ರಸ್ತುತ ಸಂದರ್ಭದಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಶುಭಘಳಿಗೆಯಲ್ಲಿ ಅವರ ತ್ಯಾಗ, ಬಲಿದಾನ ಮತ್ತು ಕೊಡುಗೆಗಳನ್ನು ನೆನಪಿಸಿಕೊಳ್ಳುವುದು ಹಾಗೂ ಅವರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುವುದು ಈ ಮಣ್ಣಿನವರ ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕನ ಕರ್ತವ್ಯವಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಕಾಮತ್ ಸೂರ್ಯನಾಥ (ಸಂ)., ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಗೀತಾಬುಕ್ ಹೌಸ್, ಮೈಸೂರು, 1974.
2. ಗೋಪಾಲರಾವ್ ಎಚ್.ಎಸ್., ಕರ್ನಾಟಕ ಏಕೀಕರಣ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 2018.
3. ಚಂದ್ರಶೇಖರ್ ಎಸ್., ಸುರೇಂದ್ರರಾವ್ ಬಿ. (ಸಂ)., ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, 2016.
4. ಬಿಪಿನಚಂದ್ರ (ಮೂಲ), ಗೋಪಾಲರಾವ್ ಎಚ್.ಎಸ್. (ಅನು)., ಆಧುನಿಕ ಭಾರತದ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 2017.
5. ಮಂಜುನಾಥ ಎಸ್. ಪಾಟೀಲ, ಶ್ರೀನಿವಾಸ ಎಸ್. ಕಟ್ಟಿಮನಿ, ಡಾ. ಅಜೀದ ಇ. ಮಯರ್ (ಸಂ)., ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಗಳು, ಬಿ.ಎಲ್.ಡಿ.ಇ. ಸಂಸ್ಥೆ, ಜಮಖಂಡಿ, 2022.
6. ಮಹಾಬಲೇಶ್ವರಪ್ಪ ಬಿ.ಸಿ., ಹೈದರಾಬಾದ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು, ಶ್ರೀ ಗುರು ಪ್ರಕಾಶನ, ಕೊಟ್ಟೂರು, 2018.
7. ವಿಜಯ ಪೂಣಚ್ಚ ತಂಬಂಡ, ಸಮಕಾಲೀನ ಚರಿತ್ರೆಯ ವಿವಿಧ ಆಯಾಮಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.
8. ವಿರೂಪಾಕ್ಷಿ ಪೂಜಾರಹಳ್ಳಿ, ವಸಾಹತುಕಾಲೀನ ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009.
9. ವಿರೂಪಾಕ್ಷಿ ಪೂಜಾರಹಳ್ಳಿ, ಏಕೀಕರಣ ಚಳವಳಿ ಮತ್ತು ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2014.
10. ಶೇಷಾದ್ರಿ ಬಿ., ಚಂದ್ರಶೇಖರ ಟಿ.ಆರ್. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1998.
11. ಷೇಕ್ ಅಲಿ ಬಿ., (ಸಂ)., ಕರ್ನಾಟಕ ಚರಿತ್ರೆ ಸಂ07, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2018.
12. Outhore State Gazetteer: Bellary District, Government of Mysore, Bangalore, 1972.
13. Durgappa M.K., Freedom Movement in Bellary District, Dept. of. History, Gulbarga University, Gulbarga, 1996.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.